ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ, (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ಹೌದು, ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ,

ಬೆಳ್ತಂಗಡಿ ತಾಲ್ಲೂಕಿಗೆ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಲಕರಣೆಗಳ ಅಭಾವ

೩೫೦. ಶ್ರೀ ವಸಂತಬಂಗೇರ (ಬೆಳ್ತಂಗಡಿ) ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕಿಗೆ ಸುಮಾರು ೩೦ ನೀರಾವರಿ ಪಂಪುಸೆಟ್ಟುಗಳಿಗೆ ಮಂಜೂರಾತಿ ಸಿಕ್ಕಿದ್ದರೂ ವಿದ್ಯುತ್ ಸಲಕರಣೆಗಳ ಅಭಾವವಿರುವುದರಿಂದ ಹೆಚ್ಚಿನ ವಿದ್ಯುತ್ ಸಲಕರಣೆಗಳ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳುವುದೆ?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ಹಾಗೂ ಕೈಗಾರಿಕಾ ಮಂತ್ರಿಗಳು).—

ಅ) ಕೈಗೊಳ್ಳಲಾಗಿದೆ.

ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಗ್ರಾಮಕ್ಕೆ ವಿದ್ಯುತ್ ಒದಗಿಸುವುದು

೩೫೬. ಶ್ರೀ ವಸಂತಬಂಗೇರ (ಬೆಳ್ತಂಗಡಿ) ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನ ಶಿಶಿಲ ಗ್ರಾಮದಲ್ಲಿ ವಿದ್ಯುಚ್ಛಕ್ತಿ ಮಾರ್ಗ ಎಳೆಯಲು ಆತಂಕವಾಗಿರುವುದರಿಂದ ತೀರಾ ಮೂಲೆನಾಡು ಪ್ರದೇಶದ ವಿದ್ಯುದ್ದೀಕರಣಕ್ಕೆ ಅಡ್ಡಿಯಾದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಅಡ್ಡಿಯನ್ನು ತೆರವು ಮಾಡಿ ಎಷ್ಟು ಸಮಯದೊಳಗೆ ಸದರಿ ಗ್ರಾಮಕ್ಕೆ ವಿದ್ಯುಚ್ಛಕ್ತಿ ಒದಗಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ವಿದ್ಯುತ್ ಹಾಗೂ ಕೈಗಾರಿಕಾ ಮಂತ್ರಿಗಳು).—

ಅ) ಬಂದಿದೆ,

ಆ) ಮಳೆಗಾಲ ಕಳೆದ ನಂತರ ೩—೪ ತಿಂಗಳುಗಳಲ್ಲಿ.

ಕೊಡಗು ಜಿಲ್ಲೆಯ ದೇವರ ಕಾಡಿನ ಅತಿಕ್ರಮಣದ ಬಗ್ಗೆ

೩೮೪. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ''ದೇವರ ಕಾಡನ್ನು'' ರಾಜ್ಯದ ಹೊರಗಡೆಯಿಂದ ಬಂದ ಜನ ಅತಿಕ್ರಮಿಸಿ ಕಾಡನ್ನು ನಾಶಪಡಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಈ ಬಗ್ಗೆ ದಿನಾಂಕ ೭—೭—೮೬ ರಂದು ಜಿಲ್ಲೆಯ ಸಾರ್ವಜನಿಕರು ಪ್ರತಿಭಟಿಸಿ ''ಕೊಡಗು ಬಂದ್'' ಆಚರಿಸಿದ್ದು ನಿಜವೆ?

ಇ) ಈ ಅತಿಕ್ರಮಣವನ್ನು ನಿಲ್ಲಿಸಿ ''ದೇವರ ಕಾಡನ್ನು'' ಉಳಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಗಮನಕ್ಕೆ ಬಂದಿದೆ